ತಪ್ಪು ಎಂದು ಹೇಳಿ ಈಗ 626 ಜನರನ್ನು ಅಪಾಯಿಂಟ್ ಮಾಡಿದರೆ ಕರ್ನಾಟಕದಲ್ಲಿ ಪಾರ್ಟ್ ಟೈಂ ಎನ್ನುವುದೇ ಇರುವುದಿಲ್ಲ. ಅದನ್ನು ಮುಗಿಸಬೇಕು. ಎರಡು ಮೂರು ತಿಂಗಳಲ್ಲಿ ಮುಗಿಸಿಬಿಡುತ್ತೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ನಾನೊಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:– ಗಮನ ಸೆಳೆಯುವ ಸೂಚನೆಗಳು

ಶ್ರೀ ವಾಟಾಳ್ ನಾಗರಾಜ್:– ಗಡಿ ಪ್ರದೇಶದ ಅಭಿವೃದ್ಧಿಗೆ 3 ಕೋಟಿ ರೂಪಾಯಿ ಕೊಡಬೇಕು ಎಂದು ಹೇಳುವಂಥದ್ದು ಸರ್ಕಾರದಲ್ಲಿ ಒತ್ತಾಯ ಇದೆ. ಇದನ್ನು ಸರ್ಕಾರ ಕಡೆಗಾಣಿಸುತ್ತಿದೆ. ಅದರಲ್ಲೂ ಚಾಮರಾಜನಗರ ತಾಲ್ಲೂಕನ್ನು ಮಲೆನಾಡು ಅಭಿವೃದ್ಧಿ ಮಂಡಲಿಗೆ ಸೇರಿಸಿಲ್ಲ. ತಮ್ಮನ್ನು ಬಂದು ಕೇಳಿದ್ದೇನೆ. ಸರ್ಕಾರದವರು ಸಂಪೂರ್ಣವಾಗಿ ಇದನ್ನು ಕಡೆಗಣಿಸಿದ್ದಾರೆ.

ಅಧ್ಯಕ್ಷರು:– ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:– ಗಡಿ ಅಭಿವೃದ್ಧಿಗೆ ಸರ್ಕಾರ ಹಣ ಕೊಡಬೇಕು. ಇಲ್ಲದಿದ್ದರೆ ನಾವು ಧರಣಿ ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು:– ಆಯಿತು.

(ಈ ಹಂತದಲ್ಲಿ ಮಾನ್ಯ ಸದಸ್ಯರು ಬಂದು ಧರಣಿ ಕುಳಿತರು.)

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:– ನೀವು ಅವರಿಗೆ ಅವಕಾಶ ಮಾಡಿಕೊಟ್ಟರೆ ಅವರು ಬರುತ್ತಾರೆ.

ಶ್ರೀ ಧರ್ಮಸಿಂಗ್:– ಅವರು ಕ್ಲಾರಿಫಿಕೇಷನ್ ಕೇಳಲಿ.

(ಗೊಂದಲ)

ಅಧ್ಯಕ್ಷರು:– ನಾನು ಹೇಳಿದ್ದೇನೆ. ಬಜೆಟ್ ಮೇಲೆ ಮಾತನಾಡುವಾಗ ಅವರಿಗೆ ಹೆಚ್ಚಿನ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೇನೆ.

(ಗೊಂದಲ)

ಶ್ರೀ ಆಂಜನಮೂರ್ತಿ:– ಮಾನ್ಯ ವಾಟಾಳ್ ನಾಗರಾಜ್ ಅವರು ಮಾತೆತ್ತಿದರೆ ಬಾವಿಗೆ ಬೀಳುತ್ತಿದ್ದಾರೆ. ಅದನ್ನು ತಡೆಯಬೇಕು.

ಶ್ರೀ ಆರ್. ವಿ. ದೇಶಪಾಂಡೆ:– ITI instructors are on strike. ಧರಣಿ ಸತ್ಯಾಗ್ರಹ ನಡೆಯುತ್ತಾ ಇದೆ. ಇವತ್ತು ವಿಧಾನ ಸೌಧ ಚಲೋ ಮಾಡುತ್ತಿದ್ದಾರೆ. 1504 ಇನ್‌ಸ್ಟ್ರಕ್ಟರ್ಸ್ ಇದ್ದಾರೆ ಮತ್ತು 15 ಸಾವಿರ ಸ್ಟೂಡೆಂಟ್ಸ್, ಸ್ಟ್ರೈಕ್ ಮಾಡುತ್ತಿದ್ದಾರೆ. ಅವರ ಡಿಮ್ಯಾಂಡ್ಸ್ ಏನು ಅಂದರೆ ಗ್ರಾಂಟ್ ಇನ್ ಏಡ್ ಒಳಗಡೆ ಐಟಿಐಅನ್ನು ತೆಗೆದುಕೊಳ್ಳಬೇಕು ಎಂದು. You know the problem. ನಿಮ್ಮ ಜೊತೆ ಡಿಸ್ಕಸ್ ಮಾಡಿದ್ದೇನೆ. 30 ಕ್ರೋರ್ಸ್ ಬೇಕು ಎಂದು ತಾವು ಹೇಳಿದ್ದೀರಿ. 30 ಕ್ರೋರ್ಸ್ ಅವಶ್ಯಕತೆ ಇಲ್ಲ. ಅದು ಏಳು ಕೋಟಿ ರೂಪಾಯಿನಲ್ಲಿ ಆಗುತ್ತದೆ. ಹಾಗಾಗಿ ಗ್ರಾಂಟ್